ಎರಡು ನಿಮಿಷ ಆತು... ಎರಡೂ ಕಡೆ ಮಾತಿಲ್ಲ.

ಇದ್ದಕ್ಕಿದ್ದಂಗ ಗಟ್ಟಿಗಿ ವದರಿದ ರೆಡ್ಡಿ, ''ಲೇ ಬೋಸುಡಿ... ನನ್ ನೋಡಾಕ್ ಬಂದ್ಯಾ... ಮಾತಾಡಾಕ್ ಬಂದ್ಯಾ?'' ಅಷ್ಟೊತ್ತನ ಆತನ್ನ ನೋಡಿಕೆಂತ ಸುಮ್ನೆ ನಿಂತಿದ್ದ ಆಕೆ ಕಣ್ಣುಗಳು, ಹಳ್ಳ ಬಂದು ಕಡಿಮ್ಯಾದಮ್ಯಾಗ, ಹೊಸ ಉಸುಗಿನ್ಯಾಗ ತೆಗೆದ ವರ್ತಿ ನೀರು ಚಿಮ್ಮಿದಂಗ ಚಿಮ್ಮಿದವು.

''ಸಾರ್... ನನ್ನ ಕೋರ್ಟಿಗೆ ಎಳೀಬ್ಯಾಡ್ರಿ ಸರ್... ಪ್ಲೀಜ್'' ಕೈ ಮುಗುದ್ಲು ಆಕಿ.

''ಕೋರ್ಟಿಗೆ ಎಳೀಬಾಡ್ದಾ? ಚೊಲೋ ಐತಿ! ಏನು... ದಂಧಾಕ್ಕ ಹೊಸದಾಗಿ ಬಂದೀಯೇನ? ಒಂದು ಸಲ ಫೈನ್ ಹಾಕಿದ್ರ ಮತ್ ಎಲ್ಲ ಮಾಮೂಲೇ! ಯಾಕ... ಯಾವತ್ತೂ ಕೋರ್ಟಿಗೆ ಹೋಗಿಲ್ಲೇನ?''

ಇಲ್ಲ ಅಂಬಂಗ ತಲೆ ಅಡ್ಡಕ್ಕ ಆಡಿಸಿದ್ಲು ಆಕೆ.

''ಕೋರ್ಟಿಗೆ ಯಾವತ್ತೂ ಹೋಗಿಲ್ಲೇನು? ಖರೇವ್ ಹೇಳು.''

''ಖರೇವ್ ಸರ್'' ಕಣ್ಣೊರೆಸಿಗೆಂಡು ಇದ್ದಕ್ಕಿದ್ದಂಗ ರೆಡ್ಡಿ ಕಾಲಿಗೆ ಬಿದ್ಲು ಆಕೆ.

''ಸರ್... ನನಗ ಅಂಜಿಕೆ ಆತದ ಸಾರ್... ನಿಮ್ಮಿಷ್ಟ ಏನನ್ನ ಮಾಡ್ರಿ... ಕೋರ್ಟಿಗೆ ಮಾತ್ರ ಎಳೀಬ್ಯಾಡ್ರಿ ಸರ್.''

ಬಿಕ್ಕಿ ಬಿಕ್ಕಿ ಅಳಾಕತ್ತಿದ್ದ ಆಕೆ ಭುಜಗಳು ಎಗಿರೆಗಿರಿ ಬೀಳಾಕತ್ತಿದ್ವು.

ರೆಡ್ಡಿಗೆ ಒಂದ್ನಿಮಿಷ ಏನು ಮಾತಾಡ್ಬೇಕಂತ ಗೊತ್ತಾಗ್ಲಿಲ್ಲ.

''ಪ್ಚ್... ಎದ್ದೇಳು... ಮೊದ್ಲು ಎದ್ದೇಳು... ಏಳು!'' ಅಂತ ಒಂದು ಕೈಯಿಂದ ಆಕೀನ ಎಬ್ಬಿಸಿ ನಿಂದಿರಿಸಿದ ರೆಡ್ಡಿ.

''ಮೊದ್ಲು ಅಳಾದು ಸಾಕ್ ಮಾಡು... ಇಷ್ಟೇನಾ... ಇನ್ನೇನನ್ನಾ ಹೇಳಾಕೈತಾ?''

ಹೇಳಾಕ ಇನ್ನೇನೂ ಇಲ್ಲ ಅನ್ನಂಗ ಕಣ್ಣೊರೆಸಿಗೆಂಡು, ಕೈ ಕಟಿಗೆಂಡು ನಿಂತುಗಂಡ್ಲು ಆಕೆ.

ಎಸ್ಸೈ ರೆಡ್ಡಿ ತನ್ ಸರ್ವೀಸಿನ್ಯಾಗ ಇಂಥಾ ಎಷ್ಟೋ ಮಂದಿ ಪದ್ಮ, ಸಾವಿತ್ರಿ, ಸುಜಾತರಂತವರನ್ನ ನೋಡಿಬಿಟ್ಟಾನ. ಖರೇ ಹೇಳಬೇಕಂದ್ರ ಅವರ ಮುಖಗಳಾಗ, ಮಾತಿನ್ಯಾಗ, ಉಟಗಂಬದರಾಗ, ತೊಟಗಂಬದರಾಗ ಆತಗ ಏನೂ ಫರಕ್ ಕಾಣಸಂಗಿಲ್ಲ. ಈ ಕೆಲ್ಸದಾಗ ಎಲ್ಲಾ ಹೆಂಗಸ್ರು ಒಂದೇ ನಮೂನಿ ಕಾಣ್ತರ.

ಕರ್ಚೀಫಿನ್ಯಾಗ ಮುಖ ಒರೆಸಿಗೆಂಡು ಮತ್ತೆ ಆ ಹೆಂಗಸಿನ ಕಡೆ ನೋಡಿದ ರೆಡ್ಡಿ. ತೆಳ್ಳಗ ಬೆಳ್ಳಗ ಅದಾಳ. ದಪ್ಪ ಕೂದಲು, ಮೈಕೈ ತುಂಬಿಕೆಂಡು ವಳ್ಳಿಮಳ್ಳಿ ನೋಡಬೇಕು ಅನ್ನಸಂಗ ಅದಾಳ. ಅಷ್ಟೊತ್ತಾನ ಅತ್ತಿದ್ರಿಂದ್ಲೋ ಏನೋ ಕಣ್ಣುಗಳು ಫಳ ಫಳ ಹೊಳ್ಯಾಕತ್ಯಾವ. ಆಕಿ ಕೂಡಾ ಆತನ್ನಾ ನೋಡಾಕತ್ಯಾಳ. ಆಕೀ ನೋಟಕ್ಕ ಎಸ್ಸೈ ರೆಡ್ಡಿ ಮ್ಯಾಗಾ ಕೆಳಗಾ ಆಗಾಕತ್ಯಾನ.

ತನ್ನ ಎದರಿಗೆ ನಿಂತಗಂಡಿರೋ ಹರೇ ವಯಸ್ಸಿನ ಆ ಹೆಂಗಸಿನ ಜೀವ್ನ ನ್ಯಾಷನಲ್ ಹೈವೇಯಂಥದು ಅಂತ ಆತಗ ಭಾಳ ಛೊಲೋ ಗೊತ್ತು. ಆಕೀ ಬದುಕಿನ್ಯಾಗ ಎಷ್ಟೊ ಮಂದಿ ಬರ್ತಿರ್ತಾರ... ಎಷ್ಟೊ ಮಂದಿ ಹೋಗ್ತಿರ್ತಾರ. ಬಂದವ್ರು ಮತ್ತೆ ಬರ್ತಾರನ್ನೋ ಗ್ಯಾರಂಟಿ ಇಲ್ಲ. ಹೋದವ್ರು ಮತ್ತೆ ಬರಂಗಿಲ್ಲ ಅಂತ ಹೇಳುವಂಗಿಲ್ಲ. ಈ ಮಾತು ಆಶ್ಚರ್ಯ ಪಡುವಷ್ಟು ಹೊಸದೂ ಅಲ್ಲ... ವಿಷಾದ ಪಡುವಷ್ಟು ಹಳೇದೂ ಅಲ್ಲ. ಆಕೀನ ನೋಡ್ತಾ ಹೋದಂಗ, ಆಕೀ ಕಣ್ಣುಗಳಿಗೆ ಮತ್ತು ಶರೀರಕ್ಕೆ ಯಾವುದೇ ಸಂಬಂಧ ಇಲ್ಲೇನೊ ಅನಿಸಾಕತ್ತಿತು ರೆಡ್ಡಿಗೆ. ಈ ಪ್ರಪಂಚದಾಗ ಒಬ್ಬಾಕೇ ಅದಾಳೇನೋ ಅನ್ನುವಂಗಾಗಿ... ನಿಶ್ಯಬ್ದ ಬಿಟ್ರೆ ಮತ್ತೇನೂ ಇಲ್ಲ ಅನ್ನುವಂಗಾಗಿ... ಆಕೀ ಕಣ್ಣುಗಳು ವಿಚಿತ್ರವಾಗಿ... ವಿಷಾದವಾಗಿ... ನಿಶ್ಚಲವಾಗಿ ಅದಾವೇನೋ ಅನ್ನುವಂಗಾಗಿ ಒಂದು ಕ್ಷಣ ರೆಡ್ಡಿಗೆ ತಲೆಸುತ್ತಿ ಬಂದಂಗಾಯಿತು.